

ತೊನ್ನು ಎಂಬ ಚರ್ಮ ವ್ಯಾಧಿ

ವಿಟಿಲಿಗೊ ಅಥವಾ ತೊನ್ನು ಎಂಬುದು ಚರ್ಮದ ಕಾಯಿಲೆ. ಮುಖದ ಮೇಲೆ, ಕೈಕಾಲುಗಳ ಚರ್ಮದ ಮೇಲೆ ಅಲ್ಲಲ್ಲಿ ಬಿಳಿ ಬಣ್ಣದ ಪ್ಯಾಚಸ್ ಬಿದ್ದು, ನೋಡುಗರಿಗೆ ಕುರೂಪ ಎನಿಸುವ ಭಾವನೆ ಬರುವುದು. ಚರ್ಮದಲ್ಲಿ ಮೆಲನಿನ್ ಕೊರತೆ ಉಂಟಾದಾಗ ಬರುವ ತೊನ್ನು ಇತರರಿಗೆ ಹರಡುವುದಿಲ್ಲ.

■ ಡಾ. ಎಸ್‌. ಶ್ರೀನಿವಾಸ್

## ಜೂನ್ 25 ವಿಶ್ವ ವಿಟಿಲಿಗೊ ದಿನ

# ವಿಟಿಲಿಗೊ ಪ್ಲೀಸ್ ಗೋ!

ಕೆಲವು ವರ್ಷಗಳ ಹಿಂದೆ ನಮ್ಮ ಬಡಾವಣೆಯಲ್ಲಿ ದಿನವೂ ಮೂರ್ನಾಲ್ಕು ಮಂದಿ ಮಂಡಕ್ಕಿ ಚೀಲವನ್ನು ಹೊತ್ತು ವ್ಯಾಪಾರಕ್ಕೆ ಬರುವುದಿತ್ತು. ನಮಗೆ ಬೇಕೆನಿಸಿದಾಗ ಯಾರೊಬ್ಬರನ್ನಾದರೂ ಮನೆಯ ಬಳಿ ಕರೆದು ಮಂಡಕ್ಕಿ ಕೊಳ್ಳುತ್ತಿದ್ದೆವು. ಆದರೆ ಅವರಲ್ಲಿ ಒಬ್ಬ ವ್ಯಾಪಾರಿಯಿಂದ ಮಂಡಕ್ಕಿ ಖರೀದಿಸುವುದು ನಮ್ಮ ಅತ್ತೆಯವರಿಗೆ ಸುತಾರಾಂ ಇಷ್ಟವಾಗುತ್ತಿರಲಿಲ್ಲ. ನಾನು ಕಾರಣವನ್ನು ಕೇಳಿದಾಗ ಅವರು ಆತನಿಗೆ ಚರ್ಮದ ತೊನ್ನಿನ ಕಾಯಿಲೆ ಇದೆಯೆಂದೂ ಆತನಲ್ಲಿ ವ್ಯಾಪಾರ ಮಾಡಿ ನಮಗೂ ಆ ಕಾಯಿಲೆ ತಗುಲಬಹುದೆಂದು ಹೇಳಿದ್ದು ಇನ್ನೂ ನೆನಪಿದೆ. ನಾನು ಸಮರ್ಪಕ ವಿವರಣೆ ಕೊಟ್ಟ ನಂತರ ಅವರ ನಿಲುವು ಬದಲಾಗಿತ್ತು.

ಹೌದು, ಚರ್ಮದ ತೊನ್ನು ಸಮಸ್ಯೆಯ ಬಗ್ಗೆ ಇಂದಿಗೂ ಸಾರ್ವಜನಿಕರಲ್ಲಿ ಅನೇಕ ತಪ್ಪು ಕಲ್ಪನೆಗಳಿವೆ. ವಿಶ್ವದಾದ್ಯಂತ ಶೇಕಡಾ 0.5 ರಿಂದ 2 ರಷ್ಟು ಜನರನ್ನು ಬಾಧಿಸುತ್ತಿರುವ ಈ ಸಮಸ್ಯೆಯ ಬಗೆಗಿನ ಎಲ್ಲ ತಪ್ಪು ನಂಬಿಕೆಗಳನ್ನು ಹೋಗಲಾಡಿಸಿ ಸಾರ್ವಜನಿಕರಲ್ಲಿ ಅರಿವನ್ನು ಮೂಡಿಸಲೆಂದೇ ಪ್ರತಿ ವರ್ಷವೂ ಜೂನ್ 25ರಂದು ವಿಶ್ವ ವಿಟಿಲಿಗೊ (ತೊನ್ನು) ದಿನಾಚರಣೆಯನ್ನು ಆಚರಿಸಲಾಗುತ್ತದೆ.

### ಚರ್ಮ ತನ್ನ ಸಹಜ ಬಣ್ಣ ಕಳೆದುಕೊಳ್ಳುವುದೇಕೆ?

ಚರ್ಮಕ್ಕೆ ಬಣ್ಣ ಕೊಡುವ ಮೆಲನಿನ್ ಎಂಬ ವಸ್ತು ಇಲ್ಲವಾದಾಗ ಆ ಭಾಗದ ಚರ್ಮವು ಬಣ್ಣರಹಿತವಾಗಿ ಒಂದು ಬಗೆಯ ಬಿಳಿ ಬಣ್ಣಕ್ಕೆ ತಿರುಗುತ್ತದೆ. ಇದನ್ನೇ ತೊನ್ನು ಎನ್ನುವುದು. ಚರ್ಮದ ಕೆಳಪದರಗಳಲ್ಲಿರುವ ಮೆಲನೋಸೈಟ್ ಎಂಬ ಜೀವಕೋಶಗಳು ಮೆಲನಿನ್ ತಯಾರಿಸುತ್ತವೆ. ಆ ಜೀವಕೋಶಗಳು ಯಾವುದೋ ಕಾರಣಕ್ಕಾಗಿ ನಾಶ ಹೊಂದಿದಾಗ ಅಲ್ಲಿ ಮೆಲನಿನ್ ಉತ್ಪಾದನೆ ಕ್ಷೀಣಗೊಂಡು ಸಮಸ್ಯೆ ಕಾಣಿಸಿಕೊಳ್ಳುತ್ತದೆ.

### ಕಾರಣಗಳೇನು?

**ಆನುವಂಶೀಯತೆ:** ಶೇಕಡ 30ರಷ್ಟು ರೋಗಿಗಳ ಕುಟುಂಬದಲ್ಲಿ ತೊನ್ನು ಸಮಸ್ಯೆಯಿಂದ ಬಳಲುವವರನ್ನು ಕಾಣಬಹುದು.

**ರೋಗ ನಿರೋಧಕ ವ್ಯವಸ್ಥೆಯ ದೋಷ:** (ಆಟೋ ಇಮ್ಯೂನ್) ವ್ಯಕ್ತಿಯ ರೋಗ ನಿರೋಧಕ ವ್ಯವಸ್ಥೆಯು ತನ್ನದೇ ದೇಹದ ಜೀವಕೋಶಗಳಾದ ಮೆಲನೋಸೈಟ್ ವಿರುದ್ಧ ಸಕ್ರಿಯಗೊಂಡು ಅವುಗಳನ್ನು ನಾಶಪಡಿಸಿದಾಗ. ಹಾಗಾಗಿಯೇ ತೊನ್ನು ಸಮಸ್ಯೆಯಿಂದ ಬಳಲುವವರಲ್ಲಿ ರೋಗ ನಿರೋಧಕ ವ್ಯವಸ್ಥೆಯ ದೋಷದಿಂದ ಕಾಣಿಸಿಕೊಳ್ಳುವ ಇತರ ಸಮಸ್ಯೆಗಳು (ಥೈರಾಯ್ಡ್ ಸಮಸ್ಯೆ, ಮಧುಮೇಹ, ಒಂದು ಬಗೆಯ ರಕ್ತಹೀನತೆ) ಒಮ್ಮೊಮ್ಮೆ ಕಂಡುಬರುತ್ತವೆ.

ಚರ್ಮದ ಆಳವಾದ ಗಾಯಗಳು ವಾಸಿಯಾಗುವಾಗ ಒಮ್ಮೊಮ್ಮೆ ಬಣ್ಣರಹಿತ ಮಚ್ಚೆಗಳಾಗಿ ಮಾರ್ಪಾಡಾಗಬಹುದು.

ಸಾಮಾನ್ಯವಾಗಿ ಹುಟ್ಟಿನಿಂದಲೇ ಈ ಸಮಸ್ಯೆ ಯಾರನ್ನೂ ಬಾಧಿಸುವುದಿಲ್ಲ. ಬಹುತೇಕ ಸಂದರ್ಭಗಳಲ್ಲಿ ಇಪ್ಪತ್ತು ವರ್ಷ ತುಂಬುವ ಮೊದಲು ಇದು ಕಾಣಿಸಿಕೊಳ್ಳುತ್ತದೆ. ಯಾವ ಭಾಗದಲ್ಲಿ ಮೆಲನೋಸೈಟ್ ಜೀವಕೋಶಗಳು ಮರಣ ಹೊಂದುತ್ತವೆಯೋ ಆ ಭಾಗದ